

## ಮೊದಲ ವ್ಯಂಗ್ಯಚಿತ್ರಕಾರರು ಯಾರು?

ಚರಿತ್ರೆಯಲ್ಲಿ ಕೆಲವೊಂದು ಹೆಸರುಗಳು ದೊರಕಿದರೂ ಅವರೇ ಮೊದಲ ವ್ಯಂಗ್ಯಚಿತ್ರಕಾರರೆಂದು ರುಜುವಾತು ಮಾಡುವುದು ಕಷ್ಟ. ಸಾವಿರಾರು ವರ್ಷಗಳ ಹಿಂದೆ ಆದಿಮಾನವ ಗುಹೆಗಳಲ್ಲಿ ಕೆತ್ತಿರುವ ಮಾನವರ, ಪ್ರಾಣಿಗಳ ಚಿತ್ರಗಳು ಕಾರ್ಟೂನುಗಳು ಯಾಕಾಗಿರಬಾರದು ಎನ್ನುತ್ತಾರೆ ಕೆಲವರು. ಸುಮಾರು ಮೂವತ್ತು ಸಾವಿರ ವರ್ಷಗಳ ಹಿಂದೆ ಗುಹೆಗಳಲ್ಲಿ ರಚಿಸಿದ ಚಿತ್ರಗಳ ಉದ್ದೇಶ ನಮಗೆ ತಿಳಿದಿಲ್ಲ. ಅವು ಯಾವುದಾದರೂ ಆಚರಣೆಯ ಉದ್ದೇಶಕ್ಕಾಗಿ ರಚಿಸಿದ್ದೋ ಕಲಾವಿದನೊಬ್ಬನ ಕೇವಲ ವಸ್ತುಸ್ಥಿತಿ ನಿರೂಪಣೆಯೋ ಅಥವಾ ಕಲಾವಿದನೊಬ್ಬನ ಕಲೆಯ ಪ್ರದರ್ಶನಕ್ಕಾಗಿಯಷ್ಟೇ ಇರಬಹುದು. ಆದರೆ ಅವುಗಳನ್ನು ವ್ಯಂಗ್ಯ ಅಥವಾ ವಿಡಂಬನೆಯ ದೃಷ್ಟಿಯಿಂದ ರಚಿಸಿದ್ದಲ್ಲಿ ಖಂಡಿತಾ ಅವುಗಳನ್ನು ವ್ಯಂಗ್ಯಚಿತ್ರಗಳೆನ್ನಬಹುದು. ಆ ರೀತಿ ವ್ಯಂಗ್ಯ ಅಥವಾ ವಿಡಂಬನೆಯ ಉದ್ದೇಶದಿಂದ ಚಿತ್ರಗಳನ್ನು ಸುಮಾರು 2500–3000 ವರ್ಷಗಳ ಹಿಂದೆ ಗ್ರೀಕ್ ಕುಂಬಾರಿಕೆಯಲ್ಲಿ ರಚಿಸಲಾಗಿದೆ. ಚಿತ್ರ ರಚಿಸಲು ಕಾಗದ ಇಲ್ಲದ ಸಮಯದಲ್ಲಿ ಹಾಗೂ ಮನೆಮನೆಗೂ ತಲುಪುತ್ತಿದ್ದ ಮಡಿಕೆ ಕುಡಿಕೆಗಳ ಮೇಲೆ ಕುಂಬಾರ ಕಲಾವಿದರು ಪುರಾಣದ, ಪ್ರಕೃತಿಯ ಹಾಗೂ ದಿನನಿತ್ಯದ ಬದುಕಿನ ಚಿತ್ರಗಳನ್ನು ರಚಿಸುತ್ತಿದ್ದರು. ಅದೇ ರೀತಿ ವ್ಯಂಗ್ಯ ಅಥವಾ ವಿಡಂಬನೆಯ ಉದ್ದೇಶದಿಂದ ಚಿತ್ರಗಳನ್ನು ರಚಿಸುವುದು ಬಹುಶಃ ಜನಪ್ರಿಯವೂ ಆಗಿತ್ತೆನ್ನಿಸುತ್ತದೆ. ಅವುಗಳನ್ನು ಆದಿಮ ಅಥವಾ ಪ್ರೋಟೊ ವ್ಯಂಗ್ಯಚಿತ್ರಗಳೆನ್ನಬಹುದು.

ಪ್ರಾಚೀನ ನಾಗರಿಕತೆಗಳು ತಾವು ಬಿಟ್ಟು ಹೋಗುವ ಕುರುಹುಗಳಲ್ಲಿ ಮಡಕೆ–ಕುಡಿಕೆಗಳು ಪ್ರಾಚ್ಯವಸ್ತು ಸಂಶೋಧಕರಿಗೆ ಬಹಳ ಮುಖ್ಯವಾದುವು. ಅವುಗಳ ಅಧ್ಯಯನದ ಮೂಲಕ ಆ ನಾಗರಿಕತೆಗಳ ಸಾಮಾಜಿಕ ಬದುಕು, ಆಹಾರ ಅಭ್ಯಾಸಗಳು, ಅವರ ಸಾಂಸ್ಕೃತಿಕ ಆಚರಣೆ ಇತ್ಯಾದಿಗಳ ಬಗೆಗೆ ತಿಳಿಯಬಹುದು. ಸುಮಾರು 2500 ವರ್ಷಗಳ ಹಿಂದೆ ಗ್ರೀಕರು ಮಣ್ಣಿನ ಮಡಕೆ–ಕುಂಡಗಳನ್ನು ಧಾನ್ಯ, ಆಹಾರ, ನೀರು, ವೈನ್ ಮುಂತಾದುವನ್ನು ಸಂಗ್ರಹಿಸಲು, ಸಾಗಾಣಿಕೆ ಮಾಡಲು, ಕುಡಿಯಲು ಹಾಗೂ ಇನ್ನಿತರ ದಿನನಿತ್ಯದ ಕಾರ್ಯಗಳಲ್ಲಿ ಬಳಸುತ್ತಿದ್ದರು. ಮಡಕೆ ಹಾಗೂ ಕುಂಡಗಳು ಅವರಿಗೆ ಸುಲಭವಾಗಿ ಲಭಿಸುತ್ತಿದ್ದವು ಹಾಗೂ ದಿನಗಳಕೆಯ ವಸ್ತುಗಳಾಗಿದ್ದವು. ಅವು ಅವರ ಚಿತ್ರ ಕಲಾಭಿವ್ಯಕ್ತಿಯ ಮಾಧ್ಯಮಗಳೂ ಆಗಿದ್ದವು.

ಪ್ರಾರಂಭದಲ್ಲಿ, ಅಂದರೆ ಸುಮಾರು ಕ್ರಿ.ಪೂ. 1000–700ರವರೆಗೆ ಅವರು ಮಡಕೆ ಕುಡಿಕೆಗಳ ಮೇಲೆ ಜ್ಯಾಮಿತಿ ರೇಖೆಗಳ ಚಿತ್ರಗಳನ್ನು ರಚಿಸುತ್ತಿದ್ದರು. ಅವುಗಳಲ್ಲಿ ವೃತ್ತಾಕಾರ ಮತ್ತು ಅರ್ಧ ವೃತ್ತಾಕರದ ರಚನೆಗಳು ಹೆಚ್ಚು ಇರುತ್ತಿದ್ದವು. ಕ್ರಮೇಣ ಮಾನವರ ಮತ್ತು ಪ್ರಾಣಿಗಳ ಚಿತ್ರಗಳನ್ನು ರಚಿಸತೊಡಗಿದರು. ಅವು ಬಹುಪಾಲು ಪುರಾಣದ ಕತೆಗಳ ಪಾತ್ರಗಳಾಗಿದ್ದು, ವಿಶೇಷವಾಗಿ ಹೆರಾಕ್ಲಸ್‌ನ (ಹರ್ಕ್ಯುಲಿಸ್) ಸಾಹಸಗಾಥೆಗಳಾಗಿರುತ್ತಿದ್ದವು. ಆ ಸಮಯದ ಚಿತ್ರಗಳು ಬಹುಪಾಲು ಎರಡು ಆಯಾಮದ, ಬದಿ ಮಾತ್ರ ಪ್ರದರ್ಶಿಸುವ ಚಿತ್ರಗಳಾಗಿರುತ್ತಿದ್ದವು.



ಅರ್ಧ ನೀರು ಹೊರಗೆ ಹರಿಯುತ್ತಿರುವ ಪರಿವೆಯಿಲ್ಲದೆ ಮಾತಿನಲ್ಲಿ ತೊಡಗಿರುವ ಹೆಣ್ಣು (ಕ್ರಿ.ಪೂ.510 – 490ರ ಅವಧಿಯ ಚಿತ್ರ)

### ಜನಜೀವನವೇ ಕಲೆಯಾಗಿ...

ಕ್ರಿ.ಪೂ. 8ನೇ ಶತಮಾನದ ಕೊನೆಯಿಂದ 7ನೇ ಶತಮಾನದ ಪ್ರಾರಂಭದ ಅವಧಿಯಲ್ಲಿ ಗ್ರೀಕ್ ಮಡಕೆ ಚಿತ್ರಕಾರರ ಚಿತ್ರ ರಚನೆ ವಿಷಯ, ವಸ್ತುಗಳಲ್ಲಿ ಬದಲಾವಣೆಗಳು ಕಂಡುಬರತೊಡಗಿದವು. ಇದನ್ನು 'ಕೊರಿಂಥಿಯನ್ ಶೈಲಿ' ಎನ್ನುತ್ತಾರೆ. ಪುರಾಣ, ಐತಿಹ್ಯಗಳ ಹೊಸ ಹೊಸ ರಕ್ಕಸರ, ಪ್ರಾಣಿಗಳ, ವೀರಯೋಧರ ಚಿತ್ರಗಳು ಹೆಚ್ಚು ಸ್ಪಷ್ಟತೆ, ನವಿರಾದ ಗೆರೆ, ವರ್ಣಗಳೊಂದಿಗೆ ಮೂಡತೊಡಗಿದವು. ಆ ಸಮಯದಲ್ಲಿಯೇ ಚಿತ್ರ ರಚಿಸುವ ಕಲಾವಿದರು ತಮ್ಮ ರಚನೆಯ ಕೆಳಗೆ ಸಹಿ ಮಾಡತೊಡಗಿದರು. ಇಂದು ಸಂಶೋಧನಾಕಾರರಿಗೆ ಆ ರೀತಿಯ ಸಹಿಯ ಮೂಲಕ ಚಿತ್ರಕಾರರನ್ನು ಗುರುತಿಸಲು ಸಾಧ್ಯವಾಗಿದೆ. ಸುಮಾರು ಕ್ರಿ.ಪೂ. 5ನೇ ಶತಮಾನದ ಹೊತ್ತಿಗೆ ಗ್ರೀಕ್ ಕಲಾವಿದರು ಎರಡು ಆಯಾಮಗಳ ಬದಿ ಮಾತ್ರ ಕಾಣುವ ಚಿತ್ರಗಳ ರಚನೆಯಿಂದ ಮೂರು ಆಯಾಮಗಳ ಚಿತ್ರದಂತೆ ಕಾಣುವ, ಒಂದರ ಹಿಂದೆ ಮತ್ತೊಂದು ಆಕೃತಿ ಇರುವ ಚಿತ್ರರಚನೆಗಳನ್ನು ಪ್ರಾರಂಭಿಸಿದರು. ಇದನ್ನು 'ಅಥೇನಿಯನ್ ಅವಧಿ' ಎನ್ನುತ್ತಾರೆ. ಈ ಅವಧಿ ಗ್ರೀಕ್ ಕುಂಬಾರಿಕೆ ಕಲೆಯ ಉತ್ತುಂಗದ ಅವಧಿಯೆನ್ನಬಹುದು. ಈ ಅವಧಿಯ ಗ್ರೀಕ್ ಮಡಕೆಗಳ ಮೇಲಿನ ಕಲೆ ಅತ್ಯುತ್ತಮ ಗುಣಮಟ್ಟದ್ದಾಗಿದ್ದು ಅವರು ರಚಿಸುತ್ತಿದ್ದ ವಿಷಯಗಳೂ ಸಹ ಆಗಿನ ಗ್ರೀಕ್ ಬದುಕು, ವಿಚಾರಗಳ ಬಗ್ಗೆ ಮಹತ್ತರ ಮಾಹಿತಿ ನೀಡುತ್ತದೆ. ಅದೇ ಸಮಯದಲ್ಲಿಯೇ ಮಡಕೆಗಳ ಮೇಲೆ 'ಆದಿಮ ವ್ಯಂಗ್ಯಚಿತ್ರ'ಗಳೆಂದು (**Proto cartoons**) ಕರೆಯಬಹುದಾದ ಕಪ್ಪು ಮತ್ತು ಕೆಂಪು ಚಿತ್ರ ರಚನೆಗಳು ಕಂಡುಬರುತ್ತವೆ.

ಗ್ರೀಕ್ ಮಡಕೆಕುಡಿಕೆಗಳ ಅಧ್ಯಯನ 17–18ನೇ ಶತಮಾನದಿಂದ ಪ್ರಾರಂಭವಾಗಿದ್ದು, ಆ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸಲಾಗಿದೆ. ಇಂದು ಜಗತ್ತಿನಾದ್ಯಂತ ಸಾವಿರಾರು ಗ್ರೀಕ್ ಮಡಕೆ ಕುಡಿಕೆಗಳು ಹಂಚಿಹೋಗಿದ್ದು ಮ್ಯೂಸಿಯಂಗಳಲ್ಲಿ ಕಾಣಬಹುದಾಗಿದೆ. ಇನ್ನೂ ಅಧ್ಯಯನ ಮಾಡದಿರುವ ರಾಶಿ ರಾಶಿ ಮಡಕೆ ಕುಡಿಕೆಗಳಿವೆ. ವ್ಯಂಗ್ಯ ಅಥವಾ ವಿಡಂಬನೆ ಎನ್ನುವುದು ಒಂದು ಸಾಪೇಕ್ಷ ವಿಷಯ ಹಾಗೂ ಅದು ಆಯಾ ಸಮಾಜದ ಕಾಲ, ಸಂದರ್ಭ, ಸಂಸ್ಕೃತಿ ಮತ್ತು ಆಯಾ ಸಮಾಜದಲ್ಲಿ ಯಾವುದನ್ನು ತಪ್ಪು–ನಿಷಿದ್ಧ ಎಂದು ಪರಿಗಣಿಸಲಾಗಿತ್ತು ಎನ್ನುವುದನ್ನು ಆಧರಿಸಿರುತ್ತದೆ. ಪ್ರಾಚೀನ ಗ್ರೀಕ್ ಸಮಾಜದಲ್ಲಿ ವ್ಯಂಗ್ಯದ ವಿಷಯವಾಗಿದ್ದುದು ಈಗ ನಮಗೆ ವ್ಯಂಗ್ಯವನ್ನಿಸದೇ ಹೋಗಬಹುದು. ಹಾಗಾಗಿ ಗ್ರೀಕ್ ಕುಂಬಾರಿಕೆಯಲ್ಲಿನ ಚಿತ್ರಗಳ ವ್ಯಂಗ್ಯ ವಿಡಂಬನೆಯನ್ನು ಅರಿಯಲು ಅಧ್ಯಯನಕಾರರು